ದಿನಾಂಕಃ 28-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಪಿ.ಪಿ. ವಕೀಲರಿಂದಃ-

ನನ್ನ ವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ದಾವಾ ಸ್ವತ್ತುಗಳು ಕುಲುವಾಡಿಕೆ ಇನಾಂ ಸೌಲಭ್ಯದ ಅಡಿಯಲ್ಲಿ ಹೊಸಬ ಬಿನ್ ಸಣ್ಣ ಇವರಿಗೆ ಮಂಜೂರಾದ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿದ್ದೇನೆ. ಆತ ಕುಲುವಾಡಿಕೆ ಕಸುಬು ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹೊಸಬ ಬಿನ್ ಸಣ್ಣ, ಭೈರಯ್ಯ ಬಿನ್ ಹೊಸಬ ಇವರ ಹೆಸರಿನಲ್ಲಿ ಇರುವ ಆರ್.ಟಿ.ಸಿ ಗಳನ್ನ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ. ಸದರಿಯವರು ದಾವಾ ಸ್ವತ್ತುಗಳ ಸಂಬಂಧ ಕಂದಾಯ ಪಾವತಿ ಮಾಡಿದ ಬಾಬ್ತು ದಾಖಲೆಗಳನ್ನ ಹಾಜರು ಮಾಡಿಲ್ಲ. ವಾದ ಪತ್ರದಲ್ಲಿ ಭೈರಯ್ಯ ಪೌತಿಯಾದ ನಂತರ ವಾದಿ ಸಿದ್ದಯ್ಯ ಹೆಸರು ಬಾರಬಲುತಿ ವಹಿಯಲ್ಲಿ ನಮೂದಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಭೈರಯ್ಯ ಈತನಿಗೆ ಭೈರಯ್ಯ @ ಭೈರ @ ಸಣ್ಣಭೈರಯ್ಯ ಎಂದು ಮೂರು ಹೆಸರುಗಳು ಇದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವಂತೆ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ--7 ರ ವಂಶವೃಕ್ಷದಲ್ಲಿ ಸಣ್ಣ ಸಣ್ಣಯ್ಯ ಯಾನೆ ಸಣ್ಣಭೈರಯ್ಯ ಎಂದು ಹೊಸಬಯ್ಯನ ಮಗನ ಹೆಸರಾಗಿ ಬರೆಸಿದ್ದೆ ಎಂದರೆ ಸರಿ. ಹೊಸಬಯ್ಯನ ಮಗ ಸಣ್ಣ ಸಣ್ಣಯ್ಯ ಯಾನೆ ಸಣ್ಣಭೈರಯ್ಯ

ಇದ್ದರು ಎಂದು ವಾದಪತ್ರದಲ್ಲಿ ಪ್ರಸ್ತಾಪಿಸಿಲ್ಲ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ಹಕ್ಕುದಾರನ ಹೆಸರು ಸಣ್ಣ ಮತ್ತು ಕಣ್ಣ ಎಂದು ಬರೆಯಲಾಗಿದೆ ಎಂದರೆ ಸರಿ. ಕಣ್ಣ ಇವರ ವಾರಸುದಾರರನ್ನ ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ. ನಿಪಿ-20 ರ ಬರಬಾಲುತಿ ವಹಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ್ದು ಎಂದರೆ ಸರಿ. ಇನಾಂ ರದ್ದತಿ ಕಾಯ್ದೆ ಜಾರಿಗೆ ಬಂದ ನಂತರ ದಾವಾ ಸ್ವತ್ತು ನಿಮ್ಮ ಅಜ್ಜ ಹೊಸಬಯ್ಯನ ಹೆಸರಿಗಾಗಲೀ ಅಥವಾ ಅವರ ಮಗ ಭೈರಯ್ಯನ ಹೆಸರಿಗಾಗಲೀ ಮರು ಮಂಜುರಾತಿ ಆದ ಸಂಬಂಧ ದಾಖಲೆಯನ್ನ ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರಿದು ಆ ರೀತಿ ಮರು ಮಂಜೂರಾತಿ ಆಗಿಲ್ಲ ಎನ್ನುತ್ತಾರೆ. ಕಂದಾಯ ದಾಖಲಾತಿಗಳನ್ನ ನೋಡಿ ಅರ್ಥ ಮಾಡಿಕೊಳ್ಳಬಲ್ಲೆ. ಸಾಕ್ಷಿಗೆ ಹಕ್ಕುಬದಲಾವಣೆ ವಹಿಯನ್ನ ತೋರಿಸಿ ಅದರ ಪ್ರಕಾರ ಎಂ.ಆರ್.ನಂ.19/1972-73 ರಂತೆ ತಿಮ್ಮಯ್ಯ ಬಿನ್ ಸಗಣಯ್ಯ ಇವರ ಹೆಸರಿಗೆ ಮರು ಮಂಜೂರಾತಿ ಆಗಿದೆ ಎಂದರೆ ಸರಿಯಲ್ಲ. ಎಂ.ಆರ್.ನಂ.19/1972-73 ರಲ್ಲಿ ತಿಮ್ಮಯ್ಯ ಬಿನ್ ಸಗನಯ್ಯ ಈತನ ಹೆಸರು ನಮೂದಾಗಿದೆ ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ರೆಕಾರ್ಡ್ ಆಫ್ ರೈಟ್ಸ್ ಅನ್ನ ತೋರಿಸಿ ಸದರಿ ದಾಖಲೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರ ಪ್ರಕಾರ ತಿಮ್ಮಯ್ಯ ಬಿನ್ ಸಗನಯ್ಯ ಇವರಿಗೆ ದಾವಾ ಸ್ವತ್ತುಗಳು ಮರು ಮಂಜೂರಾತಿ ಆಗಿದೆ ಎಂದು ಉಲ್ಲೇಖ ಇದೆ ಎಂದರೆ ಸರಿ. ಸಾಕ್ಷಿಗೆ ಇಂಡೆಕ್ಸ್

ಆಫ್ ಲ್ಯಾಂಡ್ ಅನ್ನ ತೋರಿಸಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಿಮ್ಮಯ್ಯ ಬಿನ್ ಸಗನಯ್ಯ ಇವರಿಗೆ ಮರು ಮಂಜೂರಾತಿ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜನ ಹೆಸರೂ ಸಹ ನಮೂದಾಗಿದೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-3 ಎಂದು ಗುರುತಿಸಲಾಯಿತು. ಕಂಪ್ಯೂಟರ್ ಪಹಣಿ ಬರುವ ಪೂರ್ವದಲ್ಲಿ ಕೈಬರವಣಿಗೆ ಪಹಣಿಗಳು ಇದ್ದವು ಎಂದರೆ ಸರಿ. ಸರ್ವೆ ನಂ.107 ರ ಆಸ್ತಿಯನ್ನೂ ಸಹ ಈ ದಾವೆಯಲ್ಲಿ ದಾವಾ ಸ್ವತ್ತನ್ನಾಗಿ ಸೇರಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಪಹಣಿಯನ್ನ ತೋರಿಸಿ ಅದು ಸರ್ವೆ ನಂ.107 ಕ್ಕೆ ಸಂಬಂಧಿಸಿದ ಪಹಣಿ ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-4 ಎಂದು ಗುರುತಿಸಲಾಯಿತು. ನಿಡಿ-4 ರಲ್ಲಿ ಸರ್ವೆ ನಂ.107 ರ ಆಸ್ತಿ ತಿಮ್ಮಯ್ಯ ಬಿನ್ ಸಗನಯ್ಯ ಇವರ ಸ್ವಾಧೀನಾನುಭವದಲ್ಲಿ ಇದೆ ಎಂದು ಉಲ್ಲೇಖ ಇದೆ ಎಂದರೆ ಸರಿ. ಅದೇ ರೀತಿ ಕಾಲಂ ನಂ.9 ರಲ್ಲಿಯೂ ಸಹ ಅವರ ಹೆಸರೇ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಕುಲುವಾಡಿಕೆ ಇನಾಂ ಆಸ್ತಿಯಾದ್ದರಿಂದ ಇಂಡೆಕ್ಸ್ ಆಫ್ ಲ್ಯಾಂಡ್ ನಲ್ಲಿ ಅವರ ಹೆಸರು ನಮುದಾಗಿದ್ದರಿಂದ ಪಹಣಿಯಲ್ಲಿ ಅವರ ಹೆಸರು ಬರೆಯಲಾಗಿದೆ ಎನ್ನುತ್ತಾರೆ. ಸಾಕ್ಷಿಗೆ ಮತ್ತೊಂದು ಪಹಣಿಯನ್ನ ತೋರಿಸಿ ಅದು ಸರ್ವೆ ನಂ.107 ರ ಆಸ್ತಿಗೆ ಸಂಬಂಧಿಸಿದ ಪಹಣಿ ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ತಿಮ್ಮಯ್ಯ ಬಿನ್ ಸಗನಯ್ಯ ಇವರ ಹೆಸರನ್ನ ರೌಂಡ್ ಅಪ್ ಮಾಡಿ ಸಿದ್ದಯ್ಯ ಬಿನ್ ಭೈರಯ್ಯ ಮತ್ತು ಸಣ್ಣಮ್ಮ ಕೋಂ ನಿರ್ವಾಣಯ್ಯ ಇವರ ಹೆಸರನ್ನ

ತೋರಿಸಲಾಗಿದೆ ಎಂದರೆ ಸರಿ. ಸಿದ್ದಯ್ಯ ಬಿನ್ ಭೈರಯ್ಯ ಈ ದಾವೆಯ ವಾದಿ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ನನ್ನ ತಂದೆ ಎನ್ನುತ್ತಾರೆ. ಸಣ್ಣಮ್ಮ ಕೋಂ ನಿರ್ವಾಣಯ್ಯ ಈ ದಾವೆಯ ಪ್ರತಿವಾದಿ ಎಂದರೆ ಸರಿ. ತಿಮ್ಮಯ್ಯ ಬಿನ್ ಸಗನಯ್ಯ ಪ್ರತಿವಾದಿಯ ಮಾವ ಎಂದರೆ ಸರಿ. ಈ ದಾವೆಯಲ್ಲಿ ಸರ್ವೆ ನಂ.129 ರ ಆಸ್ತಿಯಲ್ಲಿಯೂ ಸಹ ದಾವಾ ಸ್ವತ್ತನ್ನಾಗಿ ಸೇರಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಪಹಣಿಯ ದೃಢೀಕೃತ ನಕಲನ್ನ ತೋರಿಸಿ ಸದರಿ ದಾಖಲೆ ಸರ್ವೆ ನಂ.129 ರ ಆಸ್ತಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ದಾಖಲೆಯನ್ನ ನೋಡಿ ಒಪ್ಪಿದ್ದಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನ ನಿಡಿ-6 ಎಂದು ಗುರುತಿಸಲಾಯಿತು. ನಿಡಿ-6 ರ ಪ್ರಕಾರ ಕಲಂ ನಂ.9 ರಲ್ಲಿ ಕುಲುವಾಡಿಕೆ ಇನಾಂ ತಿಮ್ಮಯ್ಯ ಕುಲುವಾಡಿಕೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅಜ್ಜನ ಹೆಸರೂ ಸಹ ಅದರಲ್ಲಿ ನಮೂದಾಗಿದೆ ಎನ್ನುತ್ತಾರೆ. ನಿಡಿ-6 ರ ಪ್ರಕಾರ ನನ್ನ ಅಜ್ಜನ ಹೆಸರ ಕೆಳಗಡೆ ನನ್ನ ತಂದೆ ಮತ್ತು ಪ್ರತಿವಾದಿ ಹೆಸರೂ ಸಹ ನಮುದಾಗಿದೆ ಎಂದರೆ ಸರಿ. ನಿಡಿ-6 ರಲ್ಲಿ ವ್ಯವಸಾಯಗಾರರ ಕಲಂನಲ್ಲಿ ತಿಮ್ಮಯ್ಯ ಈತನ ಹೆಸರು ತೋರಿಸಲಾಗಿದೆ ಎಂದರೆ ಸರಿ. ಸರ್ವೆ ನಂ.129 ರ ಆಸ್ತಿ ಪೈಕಿ ಸುಮಾರು 32 ಗುಂಟೆ ರಾಮೇಶ್ವರ ಕೆರೆಗೆ ಹೋಗಿದೆ ಎಂದರೆ ಸರಿ. ಸದರಿ ಭೂಸ್ವಾಧೀನ ಸಂಬಂಧ ಪರಿಹಾರ ಹಣವನ್ನ ಪ್ರತಿವಾದಿಗೆ ಮಂಜೂರು ಮಾಡಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.150 ರ ಆಸ್ತಿಯನ್ನೂ ಸಹ ಈ ದಾವೆಯಲ್ಲಿ ದಾವ ಸ್ವತ್ತನ್ನಾಗಿಸಲಾಗಿದೆ ಎಂದರೆ ಸರಿ. 1984-85 ರಲ್ಲಿ ಆದ ಹಕ್ಕುಬದಲಾವಣೆ ಪ್ರಕಾರ ದಾವಾ ಸ್ವತ್ತುಗಳು ತಿಮ್ಮಯ್ಯ ಈತನ ವಾರಸುದಾರರಾದ ಸಿದ್ದಯ್ಯ ಬಿನ್

ಭೈರಯ್ಯ ಮತ್ತು ಸಣ್ಣಮ್ಮ ಕೋಂ ನಿರ್ವಾಣಯ್ಯ ಇವರ ಹೆಸರಿಗೆ ಜಂಟಿ ಖಾತೆ ದಾಖಲಾಗಿದೆ ಎಂದರೆ ಸರಿ. ಸಿದ್ದಯ್ಯ ಬಿನ್ ಭೈರಯ್ಯ ತಿಮ್ಮಯ್ಯನ ವಾರಸುದಾರರಲ್ಲ ಎಂದರೆ ಸರಿ. ಪ್ರತಿವಾದಿ ಸಿದ್ದಯ್ಯ ಬಿನ್ ಭೈರಯ್ಯ ಈತನ ಹೆಸರನ್ನ ತಪ್ಪಾಗಿ ಜಂಟಿ ಖಾತೆಯಲ್ಲಿ ಸೇರಿಸಲಾಗಿದೆ ಅದನ್ನ ರದ್ದುಪಡಿಸಿಕೊಡಿ ಎಂದು ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿ ಪುರಸ್ಕರಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಆದೇಶವನ್ನ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿ ಮಾನ್ಯ ಉಪವಿಭಾಗಾಧಿಕಾರಿಗಳ ಆದೇಶವನ್ನ ರದ್ದುಪಡಿಸಿ ನಮಗೆ ಅನುಕೂಲ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಮರು ಪರಿಶೀಲನೆ ಮಾಡಿ ಎಂದು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ನಿರ್ದೇಶನ ಹೊರಡಿಸಿ ಆದೇಶಿಸಿರುತ್ತಾರೆ ಎಂದರೆ ಸರಿ. ಮಾನ್ಯ ಉಪವಿಭಾಗಾಧಿಕಾರಿಗಳು ಆದೇಶ ಹೊರಡಿಸಿ ತಹಶೀಲ್ದಾರ್ ರವರಿಗೆ ವಾರಸುದಾರಿಕೆಯಂತೆ ಖಾತೆ ಮಾಡಿ ಎಂದು ನಿರ್ದೇಶಿಸಿರುತ್ತಾರೆ ಎಂದರೆ ಸರಿ. ಮಾನ್ಯ ತಹಶೀಲ್ದಾರ್ ರವರು ವಿಚಾರಣೆ ಮಾಡಿ ತಿಮ್ಮಯ್ಯನ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ಇಟ್ಟಿದ್ದರು ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಓ.ಎಸ್.ನಂಃ 140/2021
ಪಿ.ಡಬ್ಲ್ಯೂಃ 1

ಎಸ್ಆರ್ಃ

ಓ.ಎಸ್.ನಂಃ 140/2021
ಪಿ.ಡಬ್ಲ್ಯೂಃ 1